ಅ) ಹಾಗಿದ್ದಲ್ಲಿ ಇದಕ್ಕೆ ಅವರುಗಳಿಂದ ಬಂದ ಉತ್ತರವೇನು?

ಶ್ರೀ ಎಸ್. ಬಂಗಾರಪ್ಪ. (ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಧಾನಸೌಧದ ಮುಂಭಾಗದಲ್ಲಿ ಅನಾವರಣಗೊಳಿಸಲಾದ ಪಂಡಿತ್ ಜವಹರ್‌ಲಾಲ್ ನೆಹರೂರವರ ಪ್ರತಿಮೆಗೆ ಹಾಗೂ ಅನಾವರಣ ಸಮಾರಂಭಕ್ಕೆ ತಗುಲಿದ ವೆಚ್ಚದ ಬಗ್ಗೆ

226 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಮುಂದೆ ಅನಾವರಣಗೊಳಿಸಿರುವ ಪಂಡಿತ್ ಜವಹರ್‌ಲಾಲ್ ನೆಹರುರವರ ಪ್ರತಿಮೆಗೆ ತಗುಲಿದ ವೆಚ್ಚವೆಷ್ಟು? ಹಾಗೂ ಈ ಪ್ರತಿಮೆಯನ್ನು ನಿರ್ಮಾಣ ಮಾಡಿದ ಸಂಸ್ಥೆ ಯಾವುದು?

ಆ) ಈ ಪ್ರತಿಮೆಯ ಅನಾವರಣ ಸಮಾರಂಭಕ್ಕೆ ತಗುಲಿದ ವೆಚ್ಚವೆಷ್ಟು?

ಇ) ಈ ಅನಾವರಣ ಸಮಾರಂಭಕ್ಕೆ ಜನರನ್ನು ಕರೆತರಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬಿ.ಟಿ.ಎಸ್. ಬಸ್ಸುಗಳನ್ನು ಉಪಯೋಗಿಸಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಈ ಸಂಬಂಧವಾಗಿ ರಾಜ್ಯ ರಸ್ತೆ ಸಾರಿಗೆ ಮತ್ತು ಬಿ.ಟಿ.ಎಸ್. ಬಸ್ಸುಗಳಿಗೆ ಪಾವತಿ ಮಾಡಲಾಗಿರುವ ಹಣವೆಷ್ಟು?

ಶ್ರೀ. ಎಸ್. ಬಂಗಾರಪ್ಪ. (ಮುಖ್ಯ ಮಂತ್ರಿಯವರು):

ಅ) ರೂ. 5,97,650-00. ಈ ಪ್ರತಿಮೆಯನ್ನು ಶ್ರೀ ಆರ್.ಪಿ. ಕಾಮತ್, ಶಿಲ್ಪಿಕಾರ, ನಂ. 461, ವೀರಸಾರ್ವಕರ್ ಮಾರ್ಗ, ಬೊಂಬಾಯಿ ಇವರು ತಯಾರಿಸಿರುವರು.

ಆ) ರೂ. 2,91,000-00.

ಇ) ಶಾಲಾ ಮಕ್ಕಳನ್ನು ಸಮಾರಂಭಕ್ಕೆ ಕರೆತರಲು 100 ರಾಜ್ಯ ರಸ್ತೆಸಾರಿಗೆ ಹಾಗೂ ಬಿ.ಟಿ.ಎಸ್. ಬಸ್ಸುಗಳನ್ನು ಉಪಯೋಗಿಸಲಾಯಿತು.

ಈ) ರೂ. 1,60,000-00.

ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುದೀಕರಣ ವಿಳಂಭಿಸುವ ಕುರಿತು

586 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುದೀಕರಣ ಮಾಡಲಾಗುವುದು ಎಂಬ ಘೋಷಣೆಯಿದ್ದರೂ ಸಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲಾಖೆಯವರು ಸಲಕರಣೆಗಳಿಲ್ಲ (ಮೆಟೀರಿಯಲ್ಸ್) ಎಂಬ ಕಾರಣದಿಂದ ವಿಳಂಬ ನೀತಿ ಅನುಸರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಒಂದು ವೇಳೆ ಸರಕರಣೆಗಳ ಕೊರತೆ ಇದ್ದಲ್ಲಿ ಅದನ್ನು ಯಾವ ರೀತಿಯಲ್ಲಿ ನೀಗಿಸುವಿರಿ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಸಾಲಿನ (1990-91) ಕೆಲವು ತಿಂಗಳಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಲಕರಣಗಳ ಕೊರತೆ ಇದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.